**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ**
**ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ನಾಗಮಂಗಲ.**
**CC. 256/2015 CW.2 PW.3**

ಹೆಸರು : ನಾಗರಾಜು

ತಂದೆಯ - ಹೆಸರು : ಕೆಂಪೇಗೌಡ

ವಯಸ್ಸು : ೫೫ ವರ್ಷ

ವೃತ್ತಿ : ವ್ಯವಸಾಯ

ವಾಸ ಸ್ಥಳ : ರಾಮಚಂದ್ರ ಅಗ್ರಹಾರ

ಸಾಕ್ಷಿಯು ಪ್ರಮಾಣ ಮಾಡಿದ ದಿನಾಂಕ : 12-07-2024.

ಮುಖ್ಯವಿಚಾರಣೆ:- ಸ.ಸ.ಅ ರವರಿಂದ:-

೧. ಚಾ.ಸಾ.೧ ತಾಯಿ. ಚಾ.ಸಾ.೩ ಊರಿನವರು. ಚಾ.ಸಾ.೪ ಮತ್ತು ೫ ಗೊತ್ತು. ಆರೋಪಿಗಳು ಗೊತ್ತು ನಮ್ಮೂರಿನವರು. ೨೦೧೩ – ೨೪ ರಲ್ಲಿ ಸಂಜೆ ೦೩ – ೩೦ ರಿಂದ ೦೪ – ೦೦ ಗಂಟೆ ಸಮಯದಲ್ಲಿ ಆರೋಪಿಗಳು ಜಮೀನಿನ ವಿಚಾರಕ್ಕೆ ಚಾ.ಸಾ.೧ ಮತ್ತು ೪ ರವರಿಗೆ ದೊಣ್, ಗೊದಮಟ್ಟೆ ಮತ್ತು ಕುಡುಗೋಲಿನಿಂದ ಹೊಡೆದಿರುತ್ತಾರೆ. ನಾನು ಮತ್ತು ಚಾ.ಸಾ.೪ ರವರು ಜಗಳ ಬಿಡಿಸಿದೆವು. ಜಮೀನು ನಮ್ಮದು ಎಂದು ಅವಾಚ್ಯ ಶಬ್ದಗಳಿಂದ ಬೈದರು. ನೀನು ಏನು ಮಾಡುತ್ತೀಯ ಎಂದು ಹೇಳಿದರು. ಪೋಲೀಸರು ಬಂದು ಆಸ್ಪತ್ರೆಗೆ ಕಳುಹಿಸಿದರು.

೨. ಮಾರನೆಯ ದಿನ ಪೋಲೀಸರು ೦೯ – ೦೦ ಗಂಟೆಗೆ ಮಹಜರ್ ಗೆ ಬಂದಿದ್ದರು. ನಾನೇ ಸ್ಥಳ ತೋರಿಸಿದ. ಸ್ಥಳದಲ್ಲಿ ಮಹಜರ್ ಮಾಡಿ ಮು.ಮಾ. ಗಳನ್ನು ವಶಕ್ಕೆ ಪಡೆದುಕೊಂಡು ಫೋಟೋ ತೆಗೆಯಿಸಿದರು. ೦೯- ೦೦ ರಿಂದ ೧೦ – ೦೦ ಗಂಟೆಯವರೆಗೆ ಮಹಜರ್ ಮಾಡಿದರು. ಮಹಜರ್ ಸಮಯದಲ್ಲಿ ನಾನು ಮತ್ತು ಚಾ.ಸಾ.೩ ರವರು ಇದ್ದೆವು. ಮಹಜರ್ ನಲ್ಲಿ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಮಹಜರ್ ನ್ನು ನಿಪಿ.೨ ಎಂದು, ಸಾಕ್ಷಿಯ ಸಹಿಯನ್ನು ನಿಪಿ.೨(ಎ) ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು).

<u>ಪಾಟೀ ಸವಾಲುಃ</u> ಮಾನ್ಯ ಸ.ಸ. ಅ ರವರಿಂದ.

ದಿನಾಂಕಃ ೧೨-೦೫-೨೦೧೪ ರಂದು ಸಂಜೆ ೦೪ – ೩೦ ಗಂಟೆಯ ಸಮಯದಲ್ಲಿ ಗಲಾಟೆ ಆಯಿತು ಎಂದರೆ ಸರಿ. ಆರೋಪಿಗಳು ಅಕ್ರಮವಾಗಿ ಗುಂಪುಕಟ್ಟಿಕೊಂಡು ಬಂದು ೧ನೇ ಆರೋಪಿ ಚಾ.ಸಾ.೧ ರವರಿಗೆ ಕುಡುಗೋಲಿನಿಂದ ಎಡಗಾಲಿಗೆ ಹೊಡೆದ ಎಂದರೆ ಸರಿ. ೨ನೇ ಆರೋಪಿ ಕುಡುಗೋಲಿನಿಂದ ಮತ್ತು ದೊಣ್ಣೆಯಿಂದ ಚಾ.ಸಾ.೧ ರವರ ಮಂಡಿಗೆ ಹೊಡೆದ ಎಂದರೆ ಸರಿ. ಚಾ.ಸಾ.೪ ಮತ್ತು ೫ ರವರು ಬಿಡಿಸಿಕೊಳ್ಳಲು ಹೋದಾಗ ಆರೋಪಿಗಳು ಗೊದಮಟ್ಟೆಯಿಂದ ಅವರಿಗೂ ಹಲ್ಲೆ ಮಾಡಿದರು. ಆರೋಪಿ ೬ ಮತ್ತು ೧೦ ರವರು ದೊಣ್ಣೆಯಿಂದ ಚಾ.ಸಾ.೪ ರವರ ಬೆನ್ನಿಗೆ ಹಲ್ಲೆ ಮಾಡಿದರು ಎಂದರೆ ಸರಿ. ೧೦ನೇ ಆರೋಪಿ ಚಾ.ಸಾ..೫ ರವರ ಭುಜ ಮತ್ತು ಬೆನ್ನಿಗೆ ಹೊಡೆದರು ಎಂದರೆ ಸರಿ. ಈಗ ನ್ಯಾಯಾಲಯದ ಮುಂದೆ ಇರುವ ಮು,ಮಾ. ಗಳಿಂದಲೇ ಆರೋಪಿಗಳು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಹಲ್ಲೆ ಹಿನ್ನೆಲೆಯಲ್ಲಿ ಚಾ.ಸಾ.೧ ರವರ ಕಾಲಿನ ಮೂಳೆ ಮುರಿದಿದೆ ಎಂದರೆ ಸರಿ. ಈ ಘಟನೆಯ ಬಗ್ಗೆ ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ದಿನಾಂಕಃ ೧೩-೦೫-೨೦೧೪ ರಂದು ಪೋಲೀಸರು ಮಹಜರ್ ಗೆ ಸ್ಥಳಕ್ಕೆ ಬಂದಿದ್ದರು.

<u>ಪಾಟೀ ಸವಾಲುಃ</u> ಆರೋಪಿಗಳ ಪರ ಶ್ರೀ. ಎಲ್. ವಿ. ಎ. ವಕೀಲರಿಂದ

ಆ ದಿನ ಗಲಾಟೆಯಾದಾಗ ನಾನು ಮನೆಯಲ್ಲಿ ಇದ್ದೆ. ಗಲಾಟೆಯಾದ ಸ್ಥಳದಿಂದ ನಮ್ಮ ಮನೆಗೆ ೫ ಮೀಟರ್ ದೂರ ಇದೆ. ಗಲಾಟೆ ನಡೆದ ಸಮಯದಲ್ಲಿ ನಾನು ಇರಲಿಲ್ಲ ಎನ್ನುವುದು ಸರಿ. ನನ್ನ ತಾಯಿ ಕಿರುಚಿಕೊಂಡಾಗ ಹೋದೆ. ಗಲಾಟೆಯನ್ನು ನೋಡಿದ್ದೇನೆ. ೧ನೇ ಆರೋಪಿ ಚಾ.ಸಾ.೧ ಮತ್ತು ೪ ರವರ ಮೇಲೆ ಹಲ್ಲೆ ಮಾಡಿದ. ಆ ದಿನ ನಾನು ಸ್ಥಳದಲ್ಲಿ ಇರಲಿಲ್ಲ ಆರೋಪಿಗಳು ಚಾ.ಸಾ.೧ ರವರಿಗೆ ಹಲ್ಲೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಪೋಲೀಸರು ನನ್ನನ್ನು ಮನೆಯ ಹತ್ತಿರ ಕರೆದುಕೊಂಡು ಹೋದರು. ಆ ದಿನ ನಾನು ಯಾವುದೇ ಗಲಾಟೆ ಆಗಿಲ್ಲ, ಆರೋಪಿಗಳು ಯಾರಿಗೂ ಹಲ್ಲೆ ಮಾಡಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ಘಟನಾ ಸ್ಥಳಕ್ಕೆ ಬಂದಿಲ್ಲ, ಮಹಜರ್ ಮಾಡಿಲ್ಲ, ಮು.ಮಾ.ಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ. ಗಳಂತಹ ವಸ್ತುಗಳು ಎಲ್ಲಾ ರೈತರ ಮನೆಗಳಲ್ಲಿ ಇರುತ್ತವೆ ಎನ್ನುವುದು ಸರಿ. ಆರೋಪಿಗಳು ಯಾವುದೇ ಗಲಾಟೆ ಮಾಡದೇ ಇದ್ದರೂ ಸಹ ಫಿರ್ಯಾದು ನಮ್ಮ ತಾಯಿ ಆಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುಡುಗೋಲು ನಮಗೆ ಸೇರಿದ್ದು ಪ್ರಕರಣಕ್ಕೆ ಅನುಕೂಲವಾಗುವಂತೆ ಪೋಲೀಸರಿಗೆ ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

## ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)
ಓದಿ ಹೇಳಿ ಕೇಳಿ ಸರಿ ಇದೆ

ಅಪರ ಹಿರಿಯ ಸಿವಿಲ್ ಮತ್ತು ಜೆಎಂಎಫ್ ಸಿ ನ್ಯಾಯ ಾಲಯ
ನಾಗಮಂಗಲ.